ಕಥೆ



ಕಾ.ತ. ಚಿಕ್ಕಣ್ಣ
ಕಲೆ: ರಾಮಕೃಷ್ಣ ಸಿದ್ರಪಾಲ



# ಕೂಲಿ ಕೇಳಿದ ಹುಡುಗ

ಅದು ರಿಂಗ್ ರೋಡಿನ ಏರುಗಣ್ಣು. ಕಸದ ಲೋಡು ಹೆಚ್ಚಿದ್ದರಿಂದಲೋ ಅಥವಾ ಚಡಾವು ಏರಲಾರದ ಒದ್ದಾಟವೋ ಆಟೋಗಾಡಿಯ ಅಲುಗಾಟಕ್ಕೆ ಮಾದೇವ ಸರಕ್ಕನೆ ಕಣ್ಣು ತೆರೆದ. ರಸ್ತೆ ಬದಿಯ ಮರಗಿಡಗಳ ಹಸುರು ಬಣ್ಣದ ಮೇಲೆ ಕಂದು ಬಣ್ಣದ ವೇಷ ತೊಡಿಸಿದ್ದ ಹೊಗೆ, ದೂಳು, ಸದ್ದುಗಳ ಮೊರೆತ ಅದು. ಅವನು ಕೂತಿದ್ದ ಆಟೋದಿಂದ ಹೊಮ್ಮುತ್ತಿದ್ದ ಹೊಗೆ ಮೂಗಿನೊಳಕ್ಕೆ ನುಗ್ಗುತ್ತಿತ್ತು. ಒಗ್ಗಿ ಹೋದ ಮೂಗಿಗೆ ಆಟೋ ಒಳಗಿನ ಕಸದ ಕೊಳೆತ ವಾಸನೆ ಹಾಗೂ ಪೆಟ್ರೋಲ್- ಸೀಮೆಯೆಣ್ಣೆ ಮಿಶ್ರಿತ ಹೊಗೆಗಳ ವ್ಯತ್ಯಾಸವೇ ಕಾಣದು. ಹಸ್ತವನ್ನು ಬೀಸಣಿಗೆಯಂತೆ